‘ಅವರನ್ನು ಪ್ರೀತಿಸುತ್ತೇವೆ, ಆದರೆ ನನ್ನ ಬದುಕಿನ ಎಲ್ಲ ಗುಟ್ಟುಗಳನ್ನು ಹೇಳಿಕೊಳ್ಳಲು ಸಂಕೋಚವಾಗುತ್ತದೆ’ ಎನ್ನುವ ಹಂತದಲ್ಲಿ ಪ್ರೀತಿ ಪ್ರಬುದ್ಧವಾಗಿರುವುದಿಲ್ಲ. ಅದು ಕೇವಲ ಆಕರ್ಷಣೆಯಾಗಿರಬಹುದು ಅಥವಾ ಏಕಮುಖ ಪ್ರೀತಿಯಾಗಿರಬಹುದು. ನಂಬಿಕೆ ಇಲ್ಲದ ಕಡೆ ನಿಜವಾದ ಪ್ರೀತಿ ಕಾಲಿಡುವುದಿಲ್ಲ. ಬದ್ಧತೆ ಎನ್ನುವಲ್ಲಿ ಪ್ರೀತಿ ಕೆಲವು ನಿಯಮಗಳಿಗೆ ಗೌರವ ತೋರಿಸಬೇಕು ಎಂದು ಪ್ರೀತಿ ಬಯಸುತ್ತದೆ.

ಒಂದೇ ಬಾರಿ ಇಬ್ಬರನ್ನು ಇಷ್ಟಪಡಬಹುದಾದರೂ ಅದು ಯಾರೊಬ್ಬರ ಮೇಲಿನ ಬದ್ಧ ಪ್ರೀತಿಯೂ ಆಗಿರುವುದಿಲ್ಲ. ಲೈಂಗಿಕ ಆಕರ್ಷಣೆಯನ್ನು ಮತ್ತು ಅನುರಾಗವನ್ನು ಮನಶ್ಶಾಸ್ತ್ರ ಕೊನೆಯ ಹಂತದಲ್ಲಿ ನೋಡುತ್ತದೆ. ಇದನ್ನು ಅರಿತುಕೊಂಡಾಗ ಭಗ್ನಪ್ರೇಮ ಮನುಷ್ಯನಲ್ಲಿ ಸೃಷ್ಟಿಸುವ ಭಾವನಾತ್ಮಕ ಅಲ್ಲೋಲ ಕಲ್ಲೋಲಗಳನ್ನು ಅರಿತುಕೊಳ್ಳಬಹುದು. ಒಬ್ಬ ಪ್ರೇಮಿ ಇನ್ನೊಬ್ಬನಿಗೆ ಬದ್ಧರಾಗಿ ನಡೆದುಕೊಳ್ಳದಿದ್ದರೆ ಸಂಸಾರಗಳು ಒಡೆಯುವುದನ್ನು ನೋಡಬಹುದು. ಒಬ್ಬರಲ್ಲಿ ಅನುರಾಗ ಕಳೆದುಹೋದಾಗ ಅವರೊಡನೆ ಅನ್ಯೋನ್ಯವಾಗಿರಲು ಅಸಾಧ್ಯವಾಗುತ್ತಾ ಹೋಗಬಹುದು.

ಮನಶಾಸ್ತ್ರದಲ್ಲಿ ರಾಬರ್ಟ್ ಹೇಳುವ ಮೂರು ಕೋನಗಳನ್ನು ಉಪಯೋಗಿಸಿ, ರಮ್ಯ ಪ್ರೀತಿಯ ಜೊತೆಗೆ ಎಲ್ಲ ಬಗೆಯ ಪ್ರೀತಿಯನ್ನು ಅರ್ಥಮಾಡಿಕೊಳ್ಳುವ ಪ್ರಯತ್ನವನ್ನು ಮಾಡಲಾಗಿದೆ. ಯಾವೊಂದು ಕೋನವನ್ನು ತೆಗೆದರೂ ಅದು ರಮ್ಯಪ್ರೀತಿಯ ಬದಲು ಪ್ರೀತಿಯ ಇತರೆ ಸ್ವರೂಪಗಳನ್ನು ಹೋಲುತ್ತದೆ. ಉದಾಹರಣೆಗೆ, ಪ್ರೀತಿಯಿಲ್ಲದವರಲ್ಲಿ ಇವ್ಯಾವ ಕೋನಗಳು ಇರುವುದಿಲ್ಲ. ಖಾಲಿ ಪ್ರೀತಿಯಲ್ಲಿ ಕೇವಲ ಬದ್ಧತೆ ಮಾತ್ರ ಕಾಣಬಹುದು. ಉದಾಹರಣೆಗೆ, ಯಾರೋ ಒಬ್ಬರು ತಮ್ಮ ಕೆಲಸವನ್ನು ಪ್ರೀತಿಸದಿದ್ದರೂ, ಸಂಬಳಕ್ಕಾಗಿ ಬದ್ಧರಾಗಿ ನಡೆದುಕೊಳ್ಳುತ್ತಿರಬಹುದು. ಸಾಂಗತ್ಯಕ್ಕಾಗಿ ಮಾತ್ರ ಸಂಬಂಧದಲ್ಲಿರುವವರಲ್ಲಿ ಬದ್ಧತೆ ಮತ್ತು ನಿಕಟತೆ ಇದ್ದರೂ ಅನುರಾಗದ ಕೊರತೆಯಿರಬಹುದು. ಹಾಗಾಗಿ ಅಲ್ಲಿ

**ಗಾಳಿ ನೀರು ಹೂವು ಹಣ್ಣು ಇರುವುದು ಏತಕ್ಕೆ?**
**ಪ್ರೀತಿಯಿಂದ ತಾನೆ? ಪ್ರೇಮದಿಂದ ತಾನೆ?**
**ಸೂರ್ಯ ಚಂದ್ರ ರಾತ್ರಿ ಹಗಲು ಬರುವುದು ಏತಕ್ಕೆ?**
**ಪ್ರೀತಿಯಿಂದ ತಾನೆ? ಪ್ರೇಮದಿಂದ ತಾನೆ?**

**-ಹಂಸಲೇಖ**

# ಲವ್ ಎಂದರೇನು?

ಗಂಡು–ಹೆಣ್ಣಿನ ನಡುವೆ ಮೊದಲ ನೋಟದಲ್ಲೇ ಆಕರ್ಷಣೆ ಮೂಡಿ, ಪ್ರೀತಿಯಾಗಿಬಿಡುವ ವಿಚಾರ ಅಚ್ಚರಿ ಹುಟ್ಟಿಸುವಂತಹದ್ದು. ಯಾರಿಗೆ ಯಾರ ಮೇಲೆ, ಯಾವಾಗ ಪ್ರೀತಿಯಾಗುತ್ತದೆ ಎನ್ನುವುದೊಂದು ಯಕ್ಷಪ್ರಶ್ನೆ. ಅದಕ್ಕೇ ಕೆಲವರು ಪ್ರೀತಿಗೊಂದು ವ್ಯಾಖ್ಯಾನ ನೀಡುವುದು ಸಾಧ್ಯವಿಲ್ಲ ಎನ್ನುತ್ತಾರೆ. ವ್ಯಾಖ್ಯಾನ ನೀಡಲಾಗದ್ದನ್ನೇ ಪ್ರೀತಿ ಎನ್ನುವವರಿದ್ದಾರೆ. ನಾನು ಹೇಳುತ್ತಿರುವುದು ಇದೇ ಪ್ರೀತಿಯ ಬಗ್ಗೆ. ವೈಜ್ಞಾನಿಕವಾಗಿ ಅಥವಾ ವೈದ್ಯಕೀಯವಾಗಿ ‘ಪ್ರೀತಿ’ ಅಥವಾ ‘ಲವ್’ ಎಂದರೇನು?

ವಿಕಿಪೀಡಿಯ ವ್ಯಾಖ್ಯಾನದ ಪ್ರಕಾರ ಪ್ರೀತಿಯೆನ್ನುವುದು ಒಬ್ಬರ ಬಗೆಗಿನ ಬಲವಾದ ಧನಾತ್ಮಕ ಚಿಂತನೆಗಳ ಸರಪಣಿ ಮತ್ತು ವ್ಯಕ್ತಿಗತ ಪ್ರೀತಿಯ ಮಾನಸಿಕ ಸ್ಥಿತಿ. ಈ ಲವ್‌ನಲ್ಲಿ ಬಲವಾದ ಆಕರ್ಷಣೆ, ಸಮಾನ ಆಸಕ್ತಿಗಳು ಮತ್ತು ಭಾವಾನಾತ್ಮಕ ಹೊಂದಾಣಿಕೆ ಇರಬೇಕು ಎನ್ನುತ್ತದೆ.

ತಾಯಿ ಮಗುವಿನ ನಡುವಿನ ಪ್ರೇಮ, ಯಾವುದೋ ತಿಂಡಿಯ ಬಗೆಗಿನ ಇಷ್ಟ, ಇನ್ಯಾವುದೋ ಕಲಾವಿದನ ಬಗೆಗಿನ ಒಲವು ಇದೇ ಕಾರಣಕ್ಕೆ ಭಿನ್ನವಾಗುತ್ತವೆ. ತಾತ್ವಿಕ ಕಾರಣಗಳಿಗಾಗಿ ಒಬ್ಬರನ್ನು ಹಿಂಬಾಲಿಸುವುದು ಪ್ರೀತಿಯಲ್ಲ. ಮನುಷ್ಯತ್ವದ ಪ್ರೀತಿಯೂ ಅತ್ಯಂತ ವಿಶಾಲವಾದ ಮತ್ತೊಂದು ಬಗೆಯ ಪ್ರೇಮ. ಕೋವಿಡ್‌ನಂತಹ ಪ್ಯಾಂಡೆಮಿಕ್ ಘಟಿಸಿದಾಗ ಅಸಂಖ್ಯಾತ ಬಡವರಿಗೆ, ನಿರಾಶ್ರಿತರಿಗೆ, ಪ್ರಯಾಣದಲ್ಲಿ ಇನ್ನೆಲ್ಲಿಯೋ ಸಿಲುಕಿದವರಿಗೆ,ಪ್ರಾಣಿ–ಪಕ್ಷಿಗಳಿಗೆ ಇತರೆ ಮನುಷ್ಯರು ಮಾಡಿದ ಸಹಾಯ, ಅನ್ನದಾನ ಇವೆಲ್ಲ ಮನುಷ್ಯತ್ವದ ಪ್ರೇಮದ ದ್ಯೋತಕಗಳಾಗುತ್ತವೆ.

ಪ್ರಾಚೀನ ಗ್ರೀಕ್ ದಾರ್ಶನಿಕರು ಆರು ಬಗೆಯ ಪ್ರೀತಿಯನ್ನು ಗುರುತಿಸಿದ್ದಾರೆ. ಅವುಗಳೆಂದರೆ: ಕೌಟುಂಬಿಕ ಪ್ರೀತಿ (familial), ಸ್ನೇಹಪರ (friendly) ಪ್ರೀತಿ, ಸಾತ್ವಿಕ (Platonic) ಪ್ರೀತಿ, ರಮ್ಯ (Romantic) ಪ್ರೀತಿ, ಅತಿಥಿಗಳ (guest) ಪ್ರೀತಿ, ಮತ್ತು ದೈವತ್ವದ ( Devine) ಪ್ರೀತಿ, ಸ್ವಂತ ( Self) ಪ್ರೀತಿ ಎಂದು ವಿಂಗಡಿಸಿದ್ದಾರೆ. ಆಧುನಿಕ ಚಿಂತಕರು ಪ್ರೀತಿಯ ಇನ್ನೂ ಹಲವು ಬಗೆಗಳನ್ನು ಇತ್ತೀಚೆಗೆ ಗುರುತಿಸಿದ್ದಾರೆ. ವ್ಯಾಮೋಹದ (Infatuation) ಪ್ರೀತಿ, ಖಾಲಿ (Empty) ಪ್ರೀತಿ, ಪ್ರೀತಿ (unrequited), ಸಹಚರ (companionate) ಪ್ರೀತಿ, ಕೋವಿದ (consummate) ಪ್ರೀತಿ, ಸ್ವಂತ (self) ಪ್ರೀತಿ, ಸಾಂಗತ್ಯದ (courtly) ಪ್ರೀತಿ ಎಂಬೆಲ್ಲ ವಿಧಗಳನ್ನು ಗುರುತಿಸುತ್ತಾರೆ. ಇವುಗಳ ಜೊತೆ ಪ್ರತಿ ದೇಶದ, ಧರ್ಮದ ಮತ್ತು ಸಂಸ್ಕೃತಿಯ ಜನರು ತಮ್ಮ ಸಮುದಾಯಗಳಲ್ಲಿ ಗುರುತಿಸಲಾಗುವ ಹಲವು ಹೆಸರಿನ, ಹಲವು ಬಗೆಯ ಪ್ರೀತಿಯ ರೂಪಗಳನ್ನು ಗುರುತಿಸುತ್ತಾರೆ. ಇವುಗಳಲ್ಲಿ ನಾನು ಚರ್ಚಿಸುತ್ತಿರುವುದು ರಮ್ಯ ಪ್ರೀತಿಯ ಬಗೆಯನ್ನು ಮಾತ್ರ.




ಪ್ರೇಮಿಗಳ ಆರಾಧ್ಯ ದೇವತೆ ಜೂಲಿಯೆಟ್